# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 450 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 07.12.2023 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಇತ್ತೀಚೆಗೆ ಬೆಂಗಳೂರಿನಾದ್ಯಂತ ಇರುವ ಹಲವು ಪಬ್‌ಗಳಲ್ಲಿ ಪುರುಷ ಗ್ರಾಹಕರನ್ನು ಸೆಳೆಯುವ ಉದ್ದೇಶದಿಂದ ಮಹಿಳೆಯರಿಗೆ ಉಚಿತವಾಗಿ ಮದ್ಯ ನೀಡುವ ಮೂಲಕ ಮಹಿಳೆಯರನ್ನು ದುಶ್ಚಟಗಳಿಗೆ ತಳ್ಳುವ ಉದ್ದೇಶ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? | ಅಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ | ಆದಾಯ ವೃದ್ಧಿಗಾಗಿ ಮಹಿಳೆಯರನ್ನು ಈ ರೀತಿ ಋಣಾತ್ಮಕವಾಗಿ ಬಳಸಿಕೊಳ್ಳುವುದು ಕಾನೂನು ಬಾಹಿರವಾಗುವುದಿಲ್ಲವೇ? ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಅನ್ವಯಿಸುವುದಿಲ್ಲ. |
| ಇ | ಬೆಂಗಳೂರಿನಲ್ಲಿ ಇರುವ ಅಧಿಕೃತ ಪಬ್‌ಗಳ ಸಂಖ್ಯೆ ಎಷ್ಟು; ಆ ನಗರದಲ್ಲಿ ಇಲ್ಲಿಯವರೆಗೆ ಎಷ್ಟು ಅನಧಿಕೃತ ಪಬ್‌ಗಳ ಹಾಗೂ ರೇವು ಪಾರ್ಟಿ ಅಡ್ಡಗಳ ಮೇಲೆ ಪ್ರಕರಣ ದಾಖಲಾಗಿವೆ? (ಪ್ರಕರಣಗಳವಾರು ಸಂಪೂರ್ಣ ಮಾಹಿತಿ ನೀಡುವುದು) | 2023–24ನೇ ಸಾಲಿನಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ 56 ಸ್ವತಂತ್ರ (Independent) ಪಬ್‌ಗಳು ಹಾಗೂ ಇತರೆ ಸನ್ನದುಗಳಿಗೆ ಹೊಂದಿಕೊಂಡಂತೆ (Attached) 583 ಪಬ್‌ಗಳು ಕಾರ್ಯ ನಿರ್ವಹಿಸುತ್ತಿವೆ.<br><br>ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಯಾವುದೇ ಅನಧಿಕೃತ ಪಬ್‌ಗಳು ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಿರುವುದಿಲ್ಲ. ಆದ್ದರಿಂದ, ಯಾವುದೇ ಅನಧಿಕೃತ ಪಬ್‌ಗಳ ಹಾಗೂ ರೇವ್ ಪಾರ್ಟಿಗಳ ಮೇಲೆ ಅಬಕಾರಿ ಇಲಾಖೆಯಿಂದ ಪ್ರಕರಣ ದಾಖಲಿಸಿರುವುದಿಲ್ಲ. |

**ಆಇ 68 ಇಎಲ್‌ಕ್ಯೂ 2023**

(ಆರ್.ಬಿ.ತಿಮ್ಮಾಪುರ)

ಅಬಕಾರಿ ಸಚಿವರು